ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಣಸೂರು.
ಸಿ.ಸಿ. ಸಂಖ್ಯೆಃ **360/2017**

ಪಿಡಬ್ಲ್ಯೂ **-01** ಸಿಡಬ್ಲ್ಯೂ **-01**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾದ ದಿನಾಂಕಃ **06.08.2019**

| | |
|---|---|
| ಹೆಸರುಃ | ಗಿರೀಶ |
| ತಂದೆಃ | ಕಾಳಯ್ಯ |
| ವಯಸ್ಸುಃ | **40** ವರ್ಷ |
| ಕೆಲಸಃ | ಅಂಗಡಿ ವ್ಯಾಪಾರ |
| ವಾಸಸ್ಥಳಃ | ಗಣೇಶ ಗುಡಿ ಬೀದಿ, ಹುಣಸೂರು ನಗರ |

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ ಆರೋಪಿ ಗೊತ್ತು. ಚಾಸಾ **4** ಮತ್ತು **5** ನನ್ನ ತಂದೆ-ತಾಯಿ, ಚಾಸಾ **6** ನನ್ನ ಹೆಂಡತಿ. ಚಾಸಾ **7** ಮತ್ತು **8** ನಮ್ಮ ಮನೆಯ ಪಕ್ಕದವರು. ಚಾಸಾ **9** ನಮ್ಮ ಮನೆಯ ಎದುರುಗಡೆ ಮನೆಯವರು.

ಆರೋಪಿಗೂ ನನಗೂ ಸಂಬಂಧ ಇದೆ ಎಂದು ಹೇಳಿ ನನ್ನನ್ನು ಅವರ ಮನೆಯಿಂದ ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತಾರೆ. ನಾನು ಮನೆಯಲ್ಲಿದ್ದಾಗ ಅಂದಾಜು ಮೂರು ವರ್ಷದ ಹಿಂದೆ ರಾತ್ರಿ **10.00** ಗಂಟೆ ಸಮಯದಲ್ಲಿ ಆರೋಪಿ ನಮ್ಮ ಮನೆಗೆ ಬಂದು ನಾನು ಅವರ ವಿರುದ್ಧ ಬೇರೆಯವರಿಗೆ ಇಲ್ಲ ಸಲ್ಲದನ್ನು ಹೇಳುತ್ತೇನೆ ಎಂದು ಜಗಳ ತೆಗೆದು ಕತ್ತಿನ ಪಟ್ಟಿಯನ್ನು ಹಿಡಿದುಕೊಂಡು ನನ್ನನ್ನು ಮನೆಯಿಂದ ಹೊರಕ್ಕೆ ಎಳೆದುಕೊಂಡು ಬಂದಿರುತ್ತಾರೆ. ಜಗಳವನ್ನು ನನ್ನ ತಂದೆ-ತಾಯಿ ಮತ್ತು ಅಕ್ಕ ಪಕ್ಕದ ಮನೆಯವರು ಬಿಡಿಸಿರುತ್ತಾರೆ. ಅದನ್ನು ಹೊರತುಪಡಿಸಿ ಬೇರೆ ಏನೂ ನಡೆದಿರುವುದಿಲ್ಲ. ಈ ವಿಚಾರವಾಗಿ ನಾನು ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು ಅದನುನ ನಿಪಿ **1** ಎಂದು, ಸಾಕ್ಷಿಯ ಸಹಿಯನ್ನು ನಿಪಿ **1**(ಎ) ಎಂದು ಗುರುತಿಲಾಯಿತು.

(ಈ ಹಂತದಲ್ಲಿ ಮಾನ್ಯ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ.ಸ.ಅ.ರವರಿಂದಃ ದಿಃ **23.04.2016** ರಂದು ರಾತ್ರಿ **10.30** ರ ಸಮಯದಲ್ಲಿ ನಾನು, ಚಾಸಾ **3** ರಿಂದ **5** ರವರು ಮನೆಯಲ್ಲಿದ್ದಾಗ ಯಾರೋ ಬಾಗಿಲು ಬಡಿಯುವ ಶಬ್ಧ ಕೇಳಿ ನಾನು ಲೈಟನ್ನು ಹಾಕಿ ಬಾಗಿಲನ್ನು ತೆರೆದು ನೋಡಿದಾಗ ಆರೋಪಿ ಈಗ ತೋರಿಸಿದ

ಚಾಕುವನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಬಂದಿದ್ದರು ಎಂದರೆ, ಸಾಕ್ಷಿಯು ನಾನು ನೋಡಿರುವುದಿಲ್ಲ, ಬಂದು ನನ್ನ ಕತ್ತಿನ ಪಟ್ಟಿಯನ್ನು ಹಿಡಿದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನಂತರ ಆರೋಪಿಯು ಈಗ ತೋರಿಸಿದ ಚಾಕುವನ್ನು ಹಿಡಿದುಕೊಂಡು ಸಾವಿತ್ರಿಯ ಪರವಾಗಿ ಬರುತ್ತೀಯಾ ಎಂದು ಚಾಕುವನ್ನು ಬೀಸಿದಾಗ ನನ್ನ ಬಲಗೈಯಲ್ಲಿ ಸದರಿ ಚಾಕುವನ್ನು ಹಿಡಿದಿದ್ದರಿಂದ ಬಲಗೈನ ಎರಡು ಬೆರಳುಗಳಿಗೆ ಚಾಕು ತಗುಲಿ ರಕ್ತಗಾಯವಾಯಿತು ಎಂದರೆ, ಗಾಯವಾಗಿರುತ್ತದೆ ಯಾವುದರಿಂದ ಗಾಯವಾಗಿರುತ್ತದೆ ಎಂದು ಗೊತ್ತಿಲ್ಲ. ನಂತರ ನನ್ನ ತಂದೆ-ತಾಯಿ ಮತ್ತು ನನ್ನ ಹೆಂಡತಿ ಈಗ ತೋರಿಸಿದ ಚಾಕುನ್ನು ಕಿತ್ತುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಚಾಕುವನ್ನು ಗುರುತಿಸಿದ್ದರಿಂದ ಅದನ್ನು ಎಂ ಓ 1 ಎಂದು ಗುರುತಿಸಲಾಯಿತು. ಆಗ ಚಾಸಾ 8 ಮತ್ತು 9 ಗಲಾಟೆ ಬಿಡಿಸಿ ನಮ್ಮನ್ನು ಮನೆಯ ಒಳಗೆ ಕಳುಹಿಸಿರುತ್ತಾರೆ ಎಂದರೆ ಸರಿ. ಅದಕ್ಕೆ ಸಮಾಧಾನ ಹೊಂದದ ಆರೋಪಿ ಅಲ್ಲೇ ಬಿದ್ದಿದ್ದ ಕಲ್ಲಿನಿಂದ ಹೊಡೆದಿದ್ದರಿಂದ ನಮ್ಮ ಮನೆಯು ಕಿಟಕಿಯ ಗಾಜು ಹೊಡೆದು ಹೋಗಿರುತ್ತದೆ ಎಂದರೆ ಸರಿ. ಸದರಿ ಕಲ್ಲನ್ನು ಸಾಕ್ಷಿಯು ಗುರುತಿಸಿದ್ದರಿಂದ ಅದನ್ನು ಎಂ ಓ 2 ಎಂದು ಗುರುತಿಸಲಾಯಿತು. ಹೊಡೆದು ಹೋದ ಗಾಜಿನ ಪೀಸನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು ಎಂ ಓ 3 ಎಂದು ಗುರುತಿಸಲಾಯಿತು. ಸಾಕ್ಷಿಯು ಧರಿಸಿದ್ದ ರಕ್ತಗಾಯವಾಗಿದ್ದ ಬಟ್ಟೆಗಳನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸದರಿ ಶರ್ಟ್ ಮತ್ತು ಲುಂಗಿಯನ್ನು ಒಟ್ಟಾಗಿ ಎಂ ಓ 4 ಎಂದು ಗುರುತಿಸಲಾಯಿತು. ನಮ್ಮ ಮನೆಯ ಕಿಟಕಿಯ ಗಾಜು ಹೊಡೆದಿದ್ದರಿಂದ ರೂ.2,000/-ಗಳ ನಷ್ಟವುಂಟಾಗಿರುತ್ತದೆ ಎಂದರೆ ಸರಿ. ನಂತರ ಚಾಸಾ 9 ರವರು ನನ್ನನ್ನು ಹುಣಸೂರಿನ ಸಾರ್ವಜನಿಕ ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದರೆ ಸರಿ. ನಂತರ ಪೊಲೀಸರು ನಿಪಿ 1 ರಂತೆ ನಾನು ಹೇಳಿದಂತೆ ಆಸ್ಪತ್ರೆಯಲ್ಲಿ ಬರೆದುಕೊಂಡಿರುತ್ತಾರೆ ಎಂದರೆ ಸರಿ. ನನ್ನ ಕೈಗೆ ಎಂ ಓ 1 ರಿಂದ ಹೊಡೆದಿದ್ದರಿಂದಲೇ ಗಾಯವಾಗಿರುತ್ತದೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ</u> ನಮ್ಮ ಮನೆಗೆ ಆರೋಪಿ ಬಂದಿದ್ದರು ಎಂದು ಹೇಳುವ ದಿನಾಂಕದ ಒಂದೂವರೆ-ಎರಡು ವರ್ಷಗಳ ಹಿಂದಿನಿಂದ ಆರೋಪಿ ಪರಿಚಯವಿರುತ್ತದೆ. ನನಗೂ ಮತ್ತು ಹುಣಸೂರಿನ ಪಟ್ಟಣ ಪೊಲೀಸರಿಗೂ ಯಾವುದೇ ದ್ವೇಷವಿಲ್ಲ ಎಂದರೆ ಸರಿ. ನನಗೂ ಮತ್ತು ಆರೋಪಿಗೂ

ಅಕ್ರಮ ಸಂಬಂಧವಿತ್ತು ಈ ದಿನ ನನ್ನೊಂದಿಗೆ ನನ್ನ ಹೆಂಡತಿ, ಪಕ್ಕದ ಅಂಗಡಿಯ ಸಾವಿತ್ರಿ ಮತ್ತು ನನ್ನ ತಾಯಿ ಬಂದಿರುತ್ತಾರೆ. ನನ್ನ ಮತ್ತು ಆರೋಪಿಯ ವಿಚಾರದಲ್ಲಿ ನಮ್ಮ ಪಕ್ಕದ ಅಂಗಡಿಯ ಸಾವಿತ್ರಿಯವರಿಗೆ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ಆರೋಪಿ ತನ್ನ ಗಂಡ ಮತ್ತು ಮಕ್ಕಳೊಂದಿಗೆ ಹುಣಸೂರಿನ ಗೋಕುಲ ಬಡಾವಣೆಯಲ್ಲಿ ಚೆನ್ನಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಆರೋಪಿ ನನ್ನ ಅಕ್ಕಿ ಅಂಗಡಿಗೆ ವ್ಯಾಪಾರಕ್ಕಾಗಿ ಆಗಾಗ್ಗೆ ಬರುತ್ತಿದ್ದರು ಎಂದರೆ ಸರಿ. ಆರೋಪಿ ನಮ್ಮ ಅಂಗಡಿಗೆ ವ್ಯಾಪಾರಕ್ಕಾಗಿ ಬರುತ್ತಿದ್ದ ವಿಚಾರವನ್ನು ನಾನು ತಪ್ಪಾಗಿ ನನಗೂ ಆರೋಪಿಗೂ ಅಕ್ರಮ ಸಂಬಂಧ ಇದೆ ಎಂದು ಪ್ರಚಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರದಿಂದ ಆರೋಪಿಯ ಗಂಡ ತನನ ಮಕ್ಕಳನ್ನು ಕರೆದುಕೊಂಡು ಆರೋಪಿಯನ್ನೊಬ್ಬರನ್ನೇ ಹುಣಸೂರಿನಲ್ಲಿ ಬಿಟ್ಟು ಹೊರಟು ಹೋಗಿರುತ್ತಾರೆ ಎಂದರೆ ಗೊತ್ತಿಲ್ಲ. ಗಲಾಟೆ ನಡೆಯಿತು ಎಂದು ಹೇಳುವ ಪೂರ್ವದಲ್ಲಿ ಆರೋಪಿ ಗೋಕುಲ ಬಡಾವಣೆಯಲ್ಲಿ ವಾಸವಾಗಿದ್ದರು. ನಾನು ಒಬ್ಬರೇ ಇರುತ್ತಿದ್ದ ಶಾರದಾ ಅವರ ಮನೆಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಗೋಕುಲ ಬಡಾವಣೆಯ ಆರೋಪಿಯ ಅಕಕ ಪಕ್ಕದ ಮನೆಯವರು ನಿನ್ನಿಂದಲೇ ಆರೋಪಿಯ ಜೀವನ ಹಾಳಾಗಿದೆ ಇಲ್ಲಿ ಬಾಬಾರದು ಎಂದು ಬುದ್ಧಿವಾದ ಹೇಳಿದ್ದರು ಎಂದರೆ ಸರಿಯಲ್ಲ. ಆರೋಪಿಯ ಗಂಡ ಆರೋಪಿಯನ್ನು ಬಿಟ್ಟು ಹೋದ ನಂತರ ಆರೋಪಿ ನನ್ನ ಅಂಗಡಿಗೆ ಬರುವುದನ್ನು ನಿಲ್ಲಿಸಿರುತ್ತಾರೆ ಎಂದರೆ ಸರಿ. ಆರೋಪಿ ನನ್ನ ಅಂಗಡಿಗೆ ಬರುವುದನ್ನು ನಿಲ್ಲಿಸಿದ್ದರಿಂದ ನನಗೆ ಬೇಜಾರು ಇರುತ್ತದೆ ಎಂದರೆ ಸರಿಯಲ್ಲ. ಆರೋಪಿ ನನ್ನ ಅಂಗಡಿಗೆ ಬರದೆ ಇದುದ್ದರಿಂದ ನಾನು ಸುಮಾರು ಬಾರಿ ಗೋಕುಲ ಬಡಾವಣೆಯಲ್ಲಿರುವ ಆರೋಪಿಯ ಮನೆಗೆ ಹೋಗಿ ಪೀಡಿಸುತ್ತಿದ್ದೆ ಎನ್ನುವ ವಿಚಾರದಲ್ಲಿ ಆರೋಪಿ ನನ್ನ ವಿರುದ್ಧ ಪೊಲೀಸರಿಗೆ ದೂರನ್ನು ನೀಡಿದ್ದಾರೆ ಎಂದರೆ ಸರಿ. ಈ ವಿಚಾರವಾಗಿ ಪೊಲೀಸರು ನನಗೆ ಬುದ್ಧಿ ಹೇಳಿರುತ್ತಾರೆ ಎಂದರೆ ಸರಿ. ಆರೋಪಿಗೂ ಹೇಳಿರುತ್ತಾರೆ. ನಂತರವೂ ನಾನು ಆರೋಪಿಯ ಮನೆಗೆ ರಾತ್ರಿ ಮತ್ತು ಬೆಳಗಿನ ಜಾವ ಹೋಗುತ್ತಿರುತ್ತೇನೆ ಎಂದು ಆರೋಪಿ ನನ್ನ ವಿರುದ್ಧ ದೂರನ್ನು ನೀಡಿರುತ್ತಾರೆ ಎಂದರೆ, ಸುಳ್ಳು ದೂರನ್ನು ಎರಡು ಮೂರು ಬಾರಿ ನೀಡಿರುತ್ತಾರೆ. ದೂರನ್ನು ನೀಡಿರುವ ವಿಚಾರದಲ್ಲಿ ನಾನು ಕರಿಗೌಡರ ಬೀದಿ ಮತ್ತು ಪೊಲೀಸ್ ಠಾಣೆಯಲ್ಲಿ ಆರೋಪಿಗೂ, ನನಗೂ ಅಕ್ರಮ ಸಂಬಂಧವಿದೆ ಎಂದು ಹೇಳುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿಗೂ, ನನಗೂ ಅಕ್ರಮ ಸಂಬಂಧವಿದೆ ಎಂದು ನಾನು

ಪ್ರಚಾರ ಮಾಡಿದ್ದರಿಂದ ಆರೋಪಿಯ ಗಂಡ ಶಾಶ್ವತವಾಗಿ ಆರೋಪಿಯನ್ನು ತ್ಯಜಿಸಿ ಮಕ್ಕಳನ್ನು ಕರೆದುಕೊಂಡು ಶ್ರೀರಂಗಪಟ್ಟಣದಲ್ಲಿ ವಾಸವಾಗಿದ್ದಾರೆ ಎಂದರೆ ಗೊತ್ತಿಲ್ಲ.

ದಿಃ **23.04.2016** ರಂದು ರಾತ್ರಿ **10.30** ರ ಸಮಯದಲ್ಲಿ ಗೋಕುಲ ಬಡಾವಣೆಯಲ್ಲಿರುವ ಆರೋಪಿಯ ಮನೆಗೆ ಅಕ್ರಮ ಪ್ರವೇಶ ಮಾಡಿ ಆರೋಪಿಗೆ ಹೊಡೆದು, ಬೈದು, ಮಾರಣಾಂತಿಕ ಹಲ್ಲೆ ಮಾಡಿ, ಆರೋಪಿಯ ಜಾತಿ ನಿಂದನೆಯನ್ನು ಮಾಡಿದ್ದೇನೆಂದು ಮೈಸೂರಿನ ನ್ಯಾದಲ್ಲಿ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸರಿ. ಸುಳ್ಳು ದೂರನ್ನು ದಾಖಿಸಿರುತ್ತಾರೆ. ಆರೋಪಿ ದೂರನ್ನು ದಾಖಲಿಸಿದ ವಿಚಾರವನ್ನು ಪೊಲೀಸರು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ದೂರನ್ನು ದಾಖಲಿಸಿದ ವಿಚಾರ ಗೊತ್ತಾದ ನಂತರ ನಾನು ಆರೋಪಿ ನನಗೆ ಎಂ ಓ **1** ರಿಂದ ಹಲ್ಲೆ ಮಾಡಿದ್ದಾರೆ ಎಂದು ಆಸ್ಪತ್ರೆಗೆ ದಾಖಲಾಗಿ ನಂತರ ಪೊಲೀಸರಿಗೆ ಆಸ್ಪತ್ರೆಯಿಂದಲೇ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಆರೋಪಿಯನ್ನು ನನ್ನ ಜೀವನದಲ್ಲಿ ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಆರೋಪಿ ನನಗೆ ದೈಹಿಕವಾಗಿ ಸಹಕರಿಸದೇ ಇದ್ದರೂ ಪೊಲೀಸ್ ಠಾಣೆಯಲ್ಲಿ ಹಾಗೂ ನ್ಯಾದಲ್ಲಿ ಆರೋಪಿಯೊಂದಿಗೆ ನನಗೆ ಅಕ್ರಮ ಸಂಬಂಧ ಇದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಮನೆಯ ಅಡುಗೆ ಮನೆಯಲ್ಲಿ ತರಕಾರಿ ಮತ್ತು ಇತರೆ ವಸ್ತುಗಳನ್ನು ಕತ್ತರಿಸಲು ಚಾಕು ಇರುತ್ತದೆ. ನಮ್ಮ ಮನೆಗೆ ಹೊಂದಿಕೊಂಡಂತೆ ಕಾಂಪೌಂಡ್ ಇರುತ್ತದೆ ಎಂದರೆ ಸರಿಯಲ್ಲ. ಗೇಟ್ ಇರುತ್ತದೆ. ಅದರಿಂದ ಹೊರಭಾಗದಲ್ಲಿ ಟಾರ್ ರಸ್ತೆ ಇರುತ್ತದೆ. ಅಲ್ಲಿ ಎಂ ಓ **2** ರಂತೆ ಇರುವ ಕಲ್ಲುಗಳು ಸಾಕಷ್ಟು ಇರುತ್ತವೆ ಎಂದರೆ ಸರಿ. ಎಂ ಓ **1** ಮತ್ತು **2** ನ್ನು ಪೊಲೀಸಿನವರಿಗೆ ನನ್ನ ತಾಯಿ ನೀಡಿರುತ್ತಾರೆ. ಎಂ ಓ **2** ರಿಂದ ಆರೋಪಿ ನಮ್ಮ ಮನೆಯ ಗಾಜನ್ನು ಹೊಡೆದಿದ್ದಾರೆ ಎಂದು ತೋರಿಸುವ ಯಾವುದೇ ಗುರುತನ್ನು ಎಂ ಓ **2** ರ ಮೇಲೆ ಪೊಲೀಸರು ಮಾಡಿರುವುದಿಲ್ಲ. ಎಂ ಓ **1** ನ್ನು ಗುರುತಿಸಲು ಸಹ ಪೊಲೀಸರು ಯಾವ ಗುರುತನ್ನು ಮಾಡಿರುವುದಿಲ್ಲ. ಎಂ ಓ **1** ನ್ನು ನನ್ನ ತಾಯಿ ನಮ್ಮ ಮನೆಯ ಅಡುಗೆ ಮನೆಯಿಂದ ತೆಗೆದುಕೊಂಡು ಬಂದು ಪೊಲೀಸರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿ ದಿನ ಅಡುಗೆ ಮನೆಯಲ್ಲಿ ಉಪಯೋಗಿಸುತ್ತಿದ್ದ ಚಾಕುವನ್ನು ನೋಡಿ ಅಂದಾಜಿನಲ್ಲಿ ಎಂ ಓ **1** ನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ರಸ್ತೆಯಲ್ಲಿದ್ದ

ಕಲ್ಲನ್ನು ನನ್ನ ತಾಯಿ ಪೊಲೀಸರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮನೆಯ ಒಳಗೆ ಬಿದ್ದಿದ್ದನ್ನು ನೀಡಿರುತ್ತಾರೆ. ಎಂ ಓ 1 ಮತ್ತು 2 ಕ್ಕೂ ಆರೋಪಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪ್ರತಿನಿತ್ಯ ಮನೆಯ ಮುಂದೆ ಬಿದ್ದ ಕಲ್ಲನ್ನು ನೋಡುತ್ತಿದುದ್ದರಿಂದ ಅಂದಾಜಿನಲ್ಲಿ ಎಂ ಓ 1 ನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ರಾತ್ರಿ **10.30** ರ ಸಮಯದಲ್ಲಿ ಪೊಲೀಸ್ ಠಾಣೆಗೆ ಹೋಗಿರಲಿಲ್ಲ. ನಾನು ದಿಃ **23.04.2016** ರಂದು ರಾತ್ರಿ **10.30** ರ ಸಮಯದಲ್ಲಿ ಮನೆಯಿಂದ ಹೊರಟಿರುತ್ತೇನೆ. ನಾನು ಮನೆಯಿಂದ ಹೊರಡುವಾಗ ಬೇರೆ ಶರ್ಟ್ ಮತ್ತು ಪ್ಯಾಂಟನ್ನು ಧರಿಸಿ ಹೋಗಿರುತ್ತೇನೆ. ಮನೆಯಲ್ಲಿ ಧರಿಸಿದ್ದೆ ಎಂದು ಹೇಳುವ ಎಂ ಓ 4 ನ್ನು ಬದಲಾಯಿಸಿಕೊಂಡು ಹೋಗಿದ್ದೆ. ಸದರಿ ಎಂ ಓ 4 ನ್ನು ಮುಂಬಾಗಿಲಿನ ಒಳಗಡೆ ಇಟ್ಟು ಹೋಗಿದ್ದೆ. ಪೊಲೀಸರು ಎಂ ಓ 4 ಕ್ಕೆ ಯಾವುದೇ ಗುರುತನ್ನು ಮಾಡಿರುವುದಿಲ್ಲ. ಎಂ ಓ 4 ನ್ನು ಪೊಲೀಸರಿಗೆ ನನ್ನ ತಾಯಿ ನೀಡಿರುತ್ತಾರೆ. ಎಂ ಓ 4 ನ್ನು ಧರಿಸಿ ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ಈ ಹಿಂದೆಯೇ ಆರೋಪಿ ದೂರನ್ನು ನೀಡಿದ್ದ ಹಿನ್ನಲೆಯಲ್ಲಿ ಪೊಲೀಸರು ನನ್ನನ್ನು ಹುಡುಕುತ್ತಾರೆ ಎಂದು ದಿಃ **23.04.2016** ರ ಹಿಂದಿನಿಂದಲೂ ನಾನು ಮನೆಗೆ ಬಾರದೆ ರಾತ್ರಿ **10.30** ರ ಸಮಯದಲ್ಲಿ ಆರೋಪಿ ಮನೆಯಿಂದ ತಪ್ಪಿಸಿಕೊಂಡು ಹೊರಗಡೆ ಓಡಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡ ಎಲ್ಲಾ ವಿಚಾರಗಳನ್ನು ಇದೇ ಮೊದಲ ಬಾರಿಗೆ ನ್ಯಾದಲ್ಲಿ ಹೇಳುತ್ತಿದ್ದೇನೆ ಬೇರೆ ಎಲ್ಲಿಯೂ ಹೇಳಿಲ್ಲ ಎಂದರೆ ಸರಿ. ನನಗೆ ಆರೋಪಿಯ ಪ್ರೀತಿ, ಸ್ನೇಹ, ಸಂಬಂಧವನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಪಾಟೀ ಸವಾಲಿನಲ್ಲಿ ಮಾತ್ರ ಸರ್ಕಾರಿ ವಕೀಲರು ಸೂಚಿಸಿದ ಪ್ರಶ್ನೆಗಳಿಗೆ ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ಧ ಸುಳ್ಳು ಪ್ರಚಾರವನ್ನು ನೀಡಿದ್ದರಿಂದ ಆರೋಪಿಯ ಜೀವನ ಹಾಳಾಗಿ ಇಂದು ಒಂಟಿ ಜೀವನ ನಡೆಸುತ್ತಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಪೊಲೀಸಿನವರೊಂದಿಗೆ ಚೆನ್ನಾಗಿರುವುದರಿಂದ ಆರೋಪಿ ಸಲ್ಲಿಸಿರುವ ದೂರಿನಿಂದ ಬಿಡುಗಡೆ ಹೊಂದುವ ಉದ್ದೇಶದಿಂದ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿ ರಾತ್ರಿ **10.30** ರ ಸಮಯದಲ್ಲಿ ನಮ್ಮ ಮನೆಗೆ ಬಂದಿರಲಿಲ್ಲ, ಬಾಗಿಲು ತಟ್ಟಲಿಲ್ಲ, ನನಗೆ ಚಾಕುವಿನಿಂದ ಹಲ್ಲೆ ಮಾಡಿರುವುದಿಲ್ಲ, ಸದರಿ ಗಲಾಟೆಯನ್ನು ಯಾರೂ ಬಿಡಿಸಿರುವುದಿಲ್ಲ

ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಆರೋಪಿ ಎರಡು ದೂರುಗಳನ್ನು ದಾಖಲಿಸಿದ್ದಾರೆ ಎಂದರೆ ಸರಿ. ಒಂದು ಪ್ರಸ್ತುತ ನ್ಯಾದಲ್ಲಿ ಇದ್ದು ಇನ್ನೊಂದು ಮೈಸೂರಿನ ಮಾನ್ಯ ಸತ್ರ ನ್ಯಾದಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.